ಬಿ.ಬಿ.ಎಂ.ಪಿ.ಗೆ ಸೇರಿದ ಶಾಲಾ ಕಾಲೇಜುಗಳು

312 (730) ಶ್ರೀ ವಿಜಯ ಕುಮಾರ್ ಬಿ.ಎನ್. (ಜಯನಗರ) :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ, ಸರ್ಕಾರಿ ಅನುದಾನ ರಹಿತ ಖಾಸಗಿ ಮತ್ತು ಬಿ.ಬಿ.ಎಂಪಿ. ಗೆ ಸೇರಿದ ಶಾಲಾ ಕಾಲೇಜುಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

(ಆ) ಈ ಶಾಲಾ ಕಾಲೇಜುಗಳಲ್ಲಿರುವ ಉಪನ್ಯಾಸಕರು ಹಾಗೂ ಶಿಕ್ಷಕರುಗಳ ಸಂಖ್ಯೆ ಎಷ್ಟು (ಅವರುಗಳ ವಿದ್ಯಾರ್ಹತೆಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಸೇವೆಯಲ್ಲಿರುವ ಉಪನ್ಯಾಸಕರು ಹಾಗೂ ಶಿಕ್ಷಕರುಗಳು ಅವರು ನಿರ್ವಹಿಸುತ್ತಿರುವ ಕೆಲಸಗಳಿಗೆ ಅರ್ಹರಿದ್ದಾರೆಯೇ, ಅರ್ಹರಲ್ಲದ ಉಪನ್ಯಾಸಕರು ಹಾಗೂ ಶಿಕ್ಷಕರುಗಳು ನೇಮಕಗೊಂಡಿದ್ದರೆ ಅವರುಗಳ ವಿರುದ್ಧ ಕೈಗೊಂಡಿರುವ ಕ್ರಮವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳ ವಿವರ ಈ ಕೆಂಕಂಡಂತಿದೆ

ಕ್ರಸಂ	ಶಾಲಾ/ಕಾಲೇಜುಗಳು	ಸರ್ಕಾರಿ	ಅನುದಾನಿತ	ಅನುದಾನರಹಿತ	ಬಿ.ಬಿ.ಎಂ.ಪಿ
1	ಪ್ರಾಥಮಿಕ ಶಾಲೆ	13	13	57	–
2	ಪ್ರೌಢ ಶಾಲೆ	03	11	44	01
3	ಪದವಿ ಪೂರ್ವ ಕಾಲೇಜು	01	06	16	–
	ಒಟ್ಟು	17	30	117	01

ಆ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳಲ್ಲಿನ ಶಿಕ್ಷಕರು ಉಪನ್ಯಾಸಕರುಗಳ ವಿವರ ಈ ಕೆಳಕಂಡಂತಿದೆ

ಕ್ರಸಂ	ಶಾಲಾ/ಕಾಲೇಜುಗಳು	ಸರ್ಕಾರಿ	ಅನುದಾನಿತ	ಅನುದಾನರಹಿತ	ಬಿ.ಬಿ.ಎಂ.ಪಿ
1	ಪ್ರಾಥಮಿಕ ಶಾಲೆ	88	85	336	–
2	ಪ್ರೌಢ ಶಾಲೆ	35	95	350	–
3	ಪದವಿ ಪೂರ್ವ ಕಾಲೇಜು	11	81	321	–
	ಒಟ್ಟು	134	261	1007	–

(ಇ) ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಶೇಕಡ 50 ರಷ್ಟು ಉಪನ್ಯಾಸಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅವಕಾಶವಿದೆ. ಸದರಿ ನಿಯಮಗಳನ್ನು ಪಾಲಿಸುವ ಮೂಲಕ ಅರ್ಹ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರ ಆಯ್ಕೆ ಮಾಡಿದ ನಂತರ ನೇಮಕಾತಿ ಪ್ರಾಧಿಕಾರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಶೇಕಡ 50 ರಷ್ಟು ಉಪನ್ಯಾಸಕರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಅರ್ಹ ಪ್ರೌಢಶಾಲಾ ಶಿಕ್ಷಕರುಗಳಿಗೆ ಬಡ್ತಿ ನೀಡುವ ಮೂಲಕ ತುಂಬಲಾಗುತ್ತಿದೆ. ಸಹ ಶಿಕ್ಷಕರು ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಲು ಪ್ರೌಢಶಾಲೆಯಲ್ಲಿ ಬೋದಿಸುವ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು ಈ ನಿಯಮವು ದಿನಾಂಕ: 27–05–1998ರ ಪೂರ್ವದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ಅನ್ವಯವಾಗುವುದಿಲ್ಲ. ಹಾಗೂ ಸಹ ಶಿಕ್ಷಕರು ಪ್ರೌಢಶಾಲೆಯಲ್ಲಿ ಕನಿಷ್ಟ '7' ವರ್ಷ ಸೇವೆ ಸಲ್ಲಿಸಿರಬೇಕು. ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ '5' ವರ್ಷಗಳ ಸೇವೆ ಸಲ್ಲಿಸಿರುವುದು ಬಡ್ತಿಗೆ ಪರಿಗಣಿಸಲು ಅವಕಾಶವಿರುತ್ತದೆ. ಅದರಂತೆ ಪರಿಶೀಲಿಸಿ ಅರ್ಹರಿಗೆ ಬಡ್ತಿ ನೀಡಲಾಗುತ್ತದೆ ಈ ನಿಯಮಗಳನ್ನು ಅನುದಾನಿತ ಕಾಲೇಜುಗಳಿಗೂ ಅನ್ವಯಿಸಿ ನೇರ ನೇಮಕಾತಿ ಮತ್ತು ಬಡ್ತಿ ನೀಡಲಾಗುತ್ತದೆ.

ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡುವಾಗ ಅರ್ಹ ಉಪನ್ಯಾಸಕರನ್ನು ಆಯಾ ವಿಷಯಗಳಿಗೆ ನೇಮಕಾತಿ ಮಾಡಿಕೊಳ್ಳಬೇಕೆಂಬ ಷರತ್ತು ವಿಧಿಸಲಾಗುತ್ತಿದೆ.